Akashvani : Bangalore
National Bulletins In Kannada
10.10.2025 / 19.35 pm
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಆಹಾರ ಧಾನ್ಯ ಉತ್ಪಾದನೆ ಹೆಚ್ಚಿಸುವ ಎರಡು ಪ್ರಮುಖ ಯೋಜನೆಗಳಿಗೆ ನಾಳೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
- ಪ್ರಾದೇಶಿಕ ದೇಶಗಳ ಎಲ್ಲಾ ವಿಧದ ಉಗ್ರವಾದಕ್ಕೆ ಭಾರತ-ಅಫ್ಘಾನಿಸ್ತಾನ್ ಒಮ್ಮತದ ಖಂಡನೆ
- ಬಿಹಾರ್ ವಿಧಾನ ಸಭೆ ಮೊದಲ ಹಂತದ ಚುನಾವಣೆ; ಅಧಿಸೂಚನೆಯೊಂದಿಗೆ ಇಂದು ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ
- ವೆನಿಜುಲಾದ ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರತಿಪಾದಕಿ ಮಾರಿಯಾ ಕೊರಿನಾ ಮಚಾಡೊ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ
- ಎರಡನೇ ಟೆಸ್ಟ್ ಕ್ರಿಕೆಟ್ ; ವೆಸ್ಟ್ ಇಂಡೀಸ್ ವಿರುದ್ಧ ಭಾರತದ ಯಶಸ್ವಿ ಜೈಸ್ವಾಲ್ ಶತಕ

****************

ಪ್ರಧಾನ ಮಂತ್ರಿ ನರೇಂದ್ರ ಮೋದಿ, ಪಿಎಂ-ಧನಧಾನ್ಯ ಯೋಜನಾ ಮತ್ತು ಬೇಳೆ ಕಾಳು ಉತ್ಪಾದನೆಯಲ್ಲಿ ಸ್ವಾವಲಂಬನೆ ಯೋಜನೆಗಳಿಗೆ ನಾಳೆ ಚಾಲನೆ ನೀಡಲಿದ್ದಾರೆ. ಕಡಿಮೆ ಉತ್ಪಾದಕತೆ ಇರುವ ೧೦೦ ಜಿಲ್ಲೆಗಳಲ್ಲಿ ಪಿಎಂ ಧನಧಾನ್ಯ ಕೃಷಿ ಯೋಜನೆಯಡಿ ರೈತರ ಆದಾಯ ಗಮನಾರ್ಹವಾಗಿ ಹೆಚ್ಚಿಸುವಂತೆ ಸಮಗ್ರ ಕೃಷಿ ಅಭಿವೃದ್ಧಿ ಕೈಗೊಳ್ಳಲಾಗುವುದು. ಹೊಲಗಳಿಗೆ ನೀರಾವರಿ ಸೌಲಭ್ಯ, ಸಾಲಸೌಲಭ್ಯ ಹಾಗೂ ದಾಸ್ತಾನು ಮೂಲ ಸೌಕರ್ಯ ಖಾತರಿ ಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ತೊಗರಿ ಬೇಳೆ, ಉದ್ದಿನ ಬೇಳೆ ಹಾಗೂ ಮಸೂರ್ ದಾಲ್ ಗಳಂತಹ ಪ್ರಮುಖ ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು ದ್ವಿದಳ ಧಾನ್ಯ ಮಿಷನ್‌ನ ಉದ್ದೇಶವಾಗಿದೆ. ಈ ಯೋಜನೆಯಡಿ ನೋಂದಾಯಿತ ರೈತರ ಉತ್ಪನ್ನಗಳನ್ನು ಪೂರ್ಣ ಪ್ರಮಾಣದಲ್ಲಿ ಕನಿಷ್ಠ ಬೆಂಬಲ ಬೆಲೆ ನೀಡುವ ಕೇಂದ್ರೀಯ ಸಂಸ್ಥೆಗಳು

ಖರೀದಿಸಲಿವೆ. ಬೆಳೆ ಕ್ಷೇತ್ರ ವಿಸ್ತರಣೆ, ಉತ್ಪಾದಕತೆಯಲ್ಲಿ ಸುಧಾರಣೆ ಮೂಲಕ ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಯೋಜನೆಗಳ ಉದ್ದೇಶವಾಗಿದೆ ಎಂದು ಕೃಷಿ ಸಚಿವಾಲಯ ತಿಳಿಸಿದೆ. ಕೃಷಿ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ರೈತರು, ರೈತ ಉತ್ಪನ್ನ ಸಂಘಟನೆಗಳು, ಸಹಕಾರಿ ಸಂಘಗಳ ಧುರೀಣರನ್ನು ಪ್ರಧಾನ ಮಂತ್ರಿ ಸನ್ಮಾನಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕೃಷಿ ಮೂಲ ಸೌಕರ್ಯ ನಿಧಿ, ಪಶು ಸಂಗೋಪನೆ, ಮೀನುಗಾರಿಕೆ ಮತ್ತು ಆಹಾರ ಸಂಸ್ಕರಣೆ ಕ್ಷೇತ್ರಗಳಿಗೆ ಸಂಬಂಧಿಸಿದ ೧ ಸಾವಿರದ ೧ ನೂರಕ್ಕೂ ಹೆಚ್ಚು ಯೋಜನೆಗಳ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ.

*****************

ರಾಷ್ಟ್ರಪತಿ ದ್ರೌಪದಿ ಮುರ್ಮು ಗುಜರಾತ್‌ನ ಗಿರ್ ಸೋಮನಾಥದಲ್ಲಿ ಇಂದು ಸೋಮನಾಥ ಮಹಾದೇವ್ ದೇಗುಲಕ್ಕೆ ಭೇಟಿ ನೀಡಿ ದರ್ಶನ ಪಡೆದರು. ರಾಷ್ಟ್ರಪತಿ ಅವರು ಜಲಾಭಿಷೇಕ, ಸೋಮೇಶ್ವರ ಮಹಾಪೂಜೆ ಮತ್ತು ಧ್ವಜ ಪೂಜೆಗಳನ್ನು ನೆರವೇರಿಸಿದರು. ಇದಕ್ಕೂ ಮುನ್ನ ಪ್ರವಾಸೋದ್ಯಮ ಖಾತೆ ಸಚಿವ ಮುಲುಬಾಯ್ ಬೇರಾ ಹಾಗೂ ಇತರ ಗಣ್ಯರು ರಾಷ್ಟ್ರಪತಿ ಅವರನ್ನು ಬರಮಾಡಿಕೊಂಡರು. ಇದೇ ಸಂದರ್ಭದಲ್ಲಿ ರಾಷ್ಟ್ರಪತಿ ಅವರು ಸರ್‌ಧಾರ್ ವಲ್ಲಭಾಯ್ ಪಟೇಲ್ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು. ನಂತರ ರಾಷ್ಟ್ರಪತಿ ಅವರು ಸಸಾನ್ ಗೆ ತೆರಳಿ ಗಿರ್‌ನ ಬುಡಕಟ್ಟು ಸಮುದಾಯದ ಜನರೊಂದಿಗೆ ಸಂವಾದ ನಡೆಸಲಿದ್ದಾರೆ.

*****************

ಪ್ರಾದೇಶಿಕ ದೇಶಗಳಿಂದ ಉಂಟಾಗುವ ಎಲ್ಲಾ ವಿಧದ ಉಗ್ರವಾದಗಳನ್ನು ಭಾರತ ಮತ್ತು ಅಫ್ಘಾನಿಸ್ತಾನ್ ಒಮ್ಮತದಿಂದ ಖಂಡಿಸಿವೆ. ಭಾರತದ ವಿದೇಶಾಂಗ ಖಾತೆ ಸಚಿವ ಡಾ.ಎಸ್. ಜೈಶಂಕರ್ ಹಾಗೂ ಅಫ್ಘಾನಿಸ್ತಾನ ವಿದೇಶಾಂಗ ಖಾತೆ ಸಚಿವ ಮೌಲವಿ ಅಮೀರ್ ಖಾನ್ ಮತ್ತಾಕಿ ನಡುವೆ ನವದೆಹಲಿಯಲ್ಲಿ ನಡೆದ ಮಾತುಕತೆ ನಂತರ ಹೊರಡಿಸಲಾದ ಜಂಟಿ ಹೇಳಿಕೆಯಲ್ಲಿ ಶಾಂತಿ, ಸುಸ್ಥಿರತೆ ಮತ್ತು ಪರಸ್ಪರ ನಂಬಿಕೆಯ ಪ್ರಾಮುಖ್ಯತೆಯನ್ನು ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ. ಪ್ರತಿಯೊಂದು ದೇಶ ಮತ್ತು ಮತ್ತೊಂದು ದೇಶದ ಸಾರ್ವಭೌಮತೆ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸುವಂತೆ ಹೇಳಿಕೆಯಲ್ಲಿ ತಿಳಿಸಲಾಗಿದೆ. ಸಚಿವ

ಡಾ.ಜೈಶಂಕರ್ ಇದೇ ಸಂದರ್ಭದಲ್ಲಿ ಪೆಹಲ್ಗಾಂ ಉಗ್ರಗಾಮಿ ದಾಳಿಯನ್ನು ಬಲವಾಗಿ ಖಂಡಿಸಿದ ಅಫ್ಘಾನಿಸ್ತಾನದ ನಿಲುವಿನ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

****************

ಬಿಹಾರ್ ವಿಧಾನ ಸಭೆಯ ಮೊದಲ ಹಂತದ ಚುನಾವಣೆಗಾಗಿ ಇಂದು ಅಧಿಸೂಚನೆ ಹೊರಬಿದ್ದಿದ್ದು, ನಾಮ ಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ನಾಮಪತ್ರ ಸಲ್ಲಿಸಲು ಈ ತಿಂಗಳ ೧೭ ಕೊನೆಯ ದಿನವಾಗಿದೆ. ಮುಂದಿನ ತಿಂಗಳಿನ ನವೆಂಬರ್ ೬ ರಂದು ೧೨೧ ಸ್ಥಾನಗಳಿಗೆ, ಮೊದಲ ಹಂತದ ಮತದಾನ ನಡೆಯಲಿದೆ.  ಒಟ್ಟು ೨೪೩ ಸದಸ್ಯ ಬಲದ ಬಿಹಾರ್ ವಿಧಾನ ಸಭೆಗೆ ೨ ಹಂತಗಳಲ್ಲಿ ಚುನಾವಣೆ ನಡೆಯಲಿದೆ. ನವೆಂಬರ್ ೧೧ ರಂದು ಎರಡನೇ ಹಂತದಲ್ಲಿ ೧೨೨ ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಿಗದಿಯಾಗಿದೆ. ಚುನಾವಣಾ ಅಧಿಸೂಚನೆ ಹೊರಬೀಳುತಿದ್ದಂತೆ ಬಿಹಾರ್ ರಾಜ್ಯಾದ್ಯಂತ ರಾಜಕೀಯ ಚಟುವಟಿಕೆಗಳು ಚುರುಕುಗೊಂಡಿವೆ. ಆಡಳಿತ ರೂಢ ನ್ಯಾಷನಲ್ ಡೆಮಾಕ್ರೆಟಿಕ್ ಅಲಯನ್ಸ್ - ಎನ್‌ಡಿಎ ಹಾಗೂ ವಿರೋಧಿ ಬಣದ ಗ್ರ್ಯಾಂಡ್ ಅಲಯನ್ಸ್, ಸೀಟು ಹಂಚಿಕೆ ಒಪ್ಪಂದದ ಬಗ್ಗೆ ಇನ್ನೂ ತೀರ್ಮಾನಕ್ಕೆ ಬರಬೇಕಿದೆ ಎಂದು ನಮ್ಮ ಪಾಟ್ನಾ ಬಾತ್ಮೀದಾರರು ವರದಿ ಮಾಡಿದ್ದಾರೆ. ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ನೇತೃತ್ವದ ಲೋಕಜನಶಕ್ತಿ ಪಾರ್ಟಿ ರಾಮ್‌ವಿಲಾಸ್ ಪಕ್ಷದೊಂದಿಗೆ ಎನ್‌ಡಿಎ ಚರ್ಚೆ ನಡೆಸುತ್ತಿದ್ದು, ಮುಂಬರುವ ದಿನಗಳಲ್ಲಿ ಸೀಟು ಹಂಚಿಕೆ ಸೂತ್ರ ಪ್ರಕಟಿಸುವ ನಿರೀಕ್ಷೆ ಇದೆ. ರಾಷ್ಟ್ರೀಯ ಜನತಾ ದಳ, ಕಾಂಗ್ರೆಸ್ ಮತ್ತು ಎಡ ಪಕ್ಷಗಳನ್ನು ಒಳಗೊಂಡ ಗ್ರ್ಯಾಂಡ್ ಅಲಯನ್ಸ್ ಸೀಟು ಹಂಚಿಕೆ ನಿರ್ಧರಿಸಬೇಕಿದ್ದು ಅರ್ಜಡಿ ಅಧ್ಯಕ್ಷ ಲಾಲು ಪ್ರಸಾದ್ ಪಾಟ್ನಾದಲ್ಲಿ ಇಂದು ಹಿರಿಯ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡುವ ನಿರೀಕ್ಷೆ ಇದೆ ಎಂದು ಪಾಟ್ನಾ ಬಾತ್ಮೀದಾರರು ವರದಿ ಮಾಡಿದ್ದಾರೆ.

****************

ವೆನಿಜುಲಾದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಸಂರಕ್ಷಣೆಗಾಗಿ ಅವಿರತ ಶ್ರಮಿಸಿದ ಮಾರಿಯಾ ಕೊರಿನಾ, ಮಚಾಡೊ ಅವರಿಗೆ ೨೦೨೫ರ ನೊಬೆಲ್ ಶಾಂತಿ ಪುರಸ್ಕಾರ ಪ್ರಕಟಿಸಲಾಗಿದೆ.

ವೆನಿಜುಲಾದಲ್ಲಿ ಕಬ್ಬಿಣದ ಮಹಿಳೆಯೆಂದೇ ಪ್ರಖ್ಯಾತರಾದ ಮಾರಿಯಾ ಮಚಾಡೊ ಟೈಮ್ ಮ್ಯಾಗ್ಜೀನ್ ನಲ್ಲಿ ೨೦೨೫ರ- ನೂರು ಅತೀಹೆಚ್ಚು ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿದ್ದರು.

*****************

ಸೂಕ್ಷ್ಮ, ಸಣ್ಣ, ಅತೀಸಣ್ಣ ಕೈಗಾರಿಕೆ-ಎಂ.ಎಸ್.ಎಂ.ಇ ಗಳ ಕೌಶಲ್ಯ ವರ್ಧನೆಗೆ ಸಾರ್ವಜನಿಕ ವಲಯದ ಉದ್ದಿಮೆಗಳು ನೆರವಾಗುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಸೂಕ್ಷ್ಮ, ಸಣ್ಣ, ಅತೀಸಣ್ಣ ಕೈಗಾರಿಕೆ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ. ಅವರ ಬೆಂಗಳೂರಿನಲ್ಲಿ ಇಂದು ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘದಲ್ಲಿ ನಡೆದ ಎಂ.ಎಸ್.ಎಂ.ಇ ಮಾರ್ಕೆಟಿಂಗ್ ಸಮಾವೇಶ ಉದ್ದೇಶಿಸಿ ಮಾತನಾಡಿದರು. ಹೆಚ್.ಎ.ಎಲ್, ಬಿ.ಇ.ಎಲ್, ಬಿ.ಎಚ್.ಇ.ಎಲ್ ಗಳಿಗಾಗಿ ಯೋಗ್ಯ ಉತ್ಪನ್ನ ತಯಾರಿಸಲು ನೆರವಾಗುವಂತೆ ಎಂ.ಎಸ್.ಎಂ.ಇ ಗಳಿಗೆ ತರಬೇತಿ ನೀಡುವ ಉದ್ದೇಶ ಇದೆ. ಈ ಬಗ್ಗೆ ರಕ್ಷಣಾ ಸಚಿವರಲ್ಲಿ ಪ್ರಸ್ತಾಪ ಮಾಡಲಾಗಿದೆ ಎಂದು ಅವರು ಹೇಳಿದರು.

ಧ್ವನಿ : ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ

ಜಿ-೨೦ ಮತ್ತು ಬ್ರಿಕ್ಸ್ ದೇಶಗಳು ಡಿಜಿಟಲ್ ಉತ್ಪನ್ನಗಳ ಬಗ್ಗೆ ಆಸಕ್ತಿ ವ್ಯಕ್ತ ಪಡಿಸಿವೆ. ಎಂಎಸ್ಎಂಇ ಗಳನ್ನು ಬಲಪಡಿಸುವ ಮೂಲಕ ಅತ್ಯಧಿಕ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದು ಹೇಳಿದರು.

*****************

ವಿಶ್ವ ಮಾನಸಿಕ ಆರೋಗ್ಯ ದಿನದ ಸಂದರ್ಭದಲ್ಲಿ ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ - ನಿಮ್ಹಾನ್ಸ್ , ಮನೋವಿಜ್ಞಾನಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮ ಪ್ರಕಟಿಸಿದೆ. ನಿಮ್ಹಾನ್ಸ್ ನ ನಿರ್ದೇಶಕಿ ಪ್ರೊಫೆಸರ್ ಪ್ರತಿಮಾ ಮೂರ್ತಿ ನೇತೃತ್ವದಲ್ಲಿ ನಡೆಯಲಿರುವ ಈ ಕಾರ್ಯಕ್ರಮ ಮುಂದಿನ ವರ್ಷ ಆರಂಭವಾಗಲಿದೆ. ಮುಂದಿನ ತಿಂಗಳಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ.

*****************

ನವದೆಹಲಿಯಲ್ಲಿರುವ ಅಖಿಲ ಭಾರತ ವೈದ್ಯ ವಿಜ್ಞಾನ ಸಂಸ್ಥೆ-ಏಮ್ಸ್, ಇದೇ ಮೊದಲ ಬಾರಿಗೆ ರೋಬೋಟ್ ನೆರವಿನಿಂದ ಮೂತ್ರಕೋಶ ಕಸಿ ಶಸ್ತ್ರ ಚಿಕಿತ್ಸೆ ಮಾಡುವ ಮೂಲಕ ಪ್ರಮುಖ ಮೈಲುಗಲ್ಲು ಸಾಧಿಸಿದೆ. ಮೂತ್ರಕೋಶ ಕಸಿ ಸರ್ಜನ್ ಡಾ. ವೀರೇಂದ್ರ ಕುಮಾರ್ ಬನ್ಸಾಲ್, ಇಂತಹ ಶಸ್ತ್ರ ಚಿಕಿತ್ಸೆಯನ್ನು ನಡೆಸಿದ ಮೊದಲ ಸರ್ಕಾರಿ ಸಂಸ್ಥೆ ಏಮ್ಸ್ ಆಗಿದೆ ಎಂದು ತಿಳಿಸಿದ್ದಾರೆ. ಕಳೆದ ತಿಂಗಳ ೩ ರಂದು ಮೊದಲ ಶಸ್ತ್ರ ಚಿಕಿತ್ಸೆ ಮಾಡಲಾಗಿದ್ದು, ಇದುವರೆಗೆ ಐವರೂ ಈ ಸೌಲಭ್ಯದ ಪ್ರಯೋಜನ ಪಡೆದಿದ್ದಾರೆ. ಓಪನ್ ಸರ್ಜರಿಗಿಂತ ರೊಬೋಟ್ ನೆರವಿನ ಸರ್ಜರಿಯಲ್ಲಿ ರೋಗಿಗಳ ಚೇತರಿಕೆ ಪ್ರಮಾಣ ತ್ವರಿತವಾಗಿದ್ದು, ರೋಗಿಗಳನ್ನು ಒಂದು ವಾರದಲ್ಲೇ ಡಿಸ್‌ಚಾರ್ಜ್ ಮಾಡಬಹುದಾಗಿದೆ. ಖಾಸಗಿ ಆಸ್ಪತ್ರೆಗೆ ಹೋಲಿಸಿದ್ದಲ್ಲಿ, ರೊಬೋಟ್ ನೆರವಿನ ಮೂತ್ರಕೋಶ ಕಸಿ ಶಸ್ತ್ರಚಿಕಿತ್ಸೆ ವೆಚ್ಚ ಅತಿಕಡಿಮೆಯದ್ದಾಗಿದೆ ಎಂದು ಡಾ. ವೀರೇಂದ್ರ ಕುಮಾರ್ ಬನ್ಸಾಲ್ ಹೇಳಿದ್ದಾರೆ.

ಧ್ವನಿ: ಸರ್ಜನ್ ಡಾ. ವೀರೇಂದ್ರ ಕುಮಾರ್ ಬನ್ಸಾಲ್

*****************

ಯಶಸ್ವಿ ಜೈಸ್ವಾಲ್ ಅವರ ಅಜೇಯ ೧೭೩ ರನ್‌ಗಳ ನೆರವಿನಿಂದ ಭಾರತ, ವೆಸ್ಟ್ ಇಂಡೀಸ್ ವಿರುದ್ಧ ೨ನೇ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ದಿನದ ಆಟದ ಮುಕ್ತಾಯಕ್ಕೆ ೨ ವಿಕೆಟ್ ನಷ್ಟಕ್ಕೆ ೩೧೮ ರನ್ ಗಳಿಸಿದೆ. ಕೆ.ಎಲ್. ರಾಹುಲ್ ೩೮ ಸಾಯ್ ಸುದರ್ಶನ್ ೮೭ ರನ್ ಮಾಡಿ ಔಟ್ ಆಗಿದ್ದಾರೆ. ನಾಯಕ ಶುಭಮನ್‌ಗಿಲ್ ೨೦ ರನ್ ಗಳಿಸಿ ಕ್ರೀಸ್ ನಲ್ಲಿದ್ದರು.

*****************

ಕರ್ನಾಟಕ ಸೇರಿದಂತೆ ಕೇರಳ, ಒಡಿಸ್ಸಾ, ತಮಿಳುನಾಡು, ಪಾಂಡಿಚೇರಿಗಳ ವಿವಿಧ ಸ್ಥಳಗಳಲ್ಲಿ ಮುಂದಿನ ಎರಡು -ಮೂರು ದಿನಗಳ ಕಾಲ ಭಾರೀ ಮಳೆಯಾಗಲಿದೆ. ಇದಲ್ಲದೇ ಅರುಣಾಚಲಪ್ರದೇಶ, ಪಶ್ಚಿಮಬಂಗಾಳ, ಲಕ್ಷದ್ವೀಪಗಳಲ್ಲಿ ಗುಡುಗಿನಿಂದ ಕೂಡಿದ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

*****************